ಶ್ರೀ ಎ. ಲಕ್ಷ್ಮೀಸಾಗರ್ ,—(ನಗರಾಭಿವೃದ್ಧಿ ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).

ಈ ಕೆಳಕಂಡ ನಿಬಂಧನೆಗಳನ್ನು ವಿಧಿಸಲಾಗಿದೆ,

---

೧. ಮುಂಗಡ ತೀವಣಿಯನ್ನು ಅಧ್ಯಕ್ಷರು, ನಗರಾಭಿವೃದ್ಧಿ, ವಿಶ್ವಸ್ಥ ಮಂಡಲಿ, ಮೈಸೂರು ರವರಿಗೆ ಪಾವತಿಯಾಗುವಂತೆ ಯಾವುದೇ ಷೆಡ್ಯೂಲ್ ಬ್ಯಾಂಕಿನ ಡಿವಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿ ಮಾಡತಕ್ಕದ್ದು.

೨. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಆಲೆಮಾರಿ, ಅರೆ ಅಲೆಮಾರಿ ಮತ್ತು ಅನುಸೂಚಿತ ಜನಾಂಗದವರು, ತಹಸೀಲ್ದಾರ್ ಅಥವಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಂದ ಪಡೆದ ಜಾತಿ ಪತ್ರವನ್ನು ಅರ್ಜಿಯ ಜೊತೆಯಲ್ಲಿ ಸಲ್ಲಿಸತಕ್ಕದ್ದು.

೩. ಅರ್ಜಿದಾರರು ಮೇಲೆ ನಮೂದಿಸಿರುವ ನಿವೇಶನಗಳ ಹಂಚಿಕೆ ನಿಯಮದ ಪ್ರಕಾರ ೫ (ಐದು) ವರ್ಷಕ್ಕೂ ಮೇಲ್ಪಟ್ಟು ಮೈಸೂರಿನಲ್ಲಿ ನಿವಾಸಿಗಳಾಗಿರಬೇಕು. ಅದರ ರೀತ್ಯ ಮೈಸೂರಿನಲ್ಲಿಯೇ ನಿವಾಸಿಗಳಿಗೆ ಮಾತ್ರ ಮಂಜೂರಾತಿಯಲ್ಲಿ ಆದ್ಯತೆ ನೀಡಲಾಗುವುದು.

೪. ನಿಯಮಿತ ಅರ್ಜಿ ನಮೂನೆಯನ್ನು ದಿನಾಂಕ ೧-೭-೮೫ರಿಂದ ಕಛೇರಿ ಕೆಲಸದ ವೇಳೆಯಲ್ಲಿ ಒಂದು ಅರ್ಜಿಗೆ ರೂ ೫-೦೦ ಪಾವತಿ ಮಾಡಿ ಪಡೆಯಬಹುದು. ಈ ಕಛೇರಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ ೩೧-೭-೮೫ರ ಸಂಜೆ ೪ ಘಂಟೆಯವರೆಗೆ ಮಾತ್ರ.

೫. ಅರ್ಜಿ ಸಲ್ಲಿಸಿರುವವರು ತಾವು ಮೈಸೂರಿನವರೆಂದು ಸ್ವೀಕರಿಸುವ ಸಲುವಾಗಿ ಮೈಸೂರು ನಗರ ಸಭೆಯಿಂದ ಮತದಾರರ ಪಟ್ಟಿಯ ಉತಾರನ್ನು ಒದಗಿಸಬೇಕು.

೬. ಅರ್ಜಿದಾರರ ಹೆಸರಿನಲ್ಲಿ ಯಾಗಲೀ ಅಥವಾ ಅವರ ಹೆಂಡತಿ, ಗಂಡ, ಮಕ್ಕಳಂಗಳ ಹೆಸರಿನಲ್ಲಿಯಾಗಲೀ ಮನೆ ಅಥವಾ ನಿವೇಶನಗಳು ಮೈಸೂರು ನಗರದ ಎಲ್ಲಿ ಯಲ್ಲಿಯಾಗಲೀ ಅಥವಾ ಬೇರೆಲ್ಲಿಯಾಗಲೀ ಇದ್ದಲ್ಲಿ ಅಂಥಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅ) ಹೌದು.

ಇ) ಇಲ್ಲ.

ಈ) ದಿನಾಂಕ ೨೭.೬.೮೫ರಂದು ಮಂಡಳಿಯು ಒಪ್ಪಿಗೆಯು ನಿರೀಕ್ಷಣೆಯು ಮೇಲೆ ಅಧ್ಯಕ್ಷರು ಟೆಂಡರು ಕರೆಯಲು ಒಪ್ಪಿದ್ದಾರೆ. ದಿನಾಂಕ ೩೦.೭.೮೫ರಂದು ವರ್ಕ್ಸ್ ಕಮಿಟಿ, ಅಧ್ಯಕ್ಷರು ತೆಗೆದು ಕೊಂಡ ಕ್ರಮವನ್ನು ಒಪ್ಪಿರುತ್ತದೆ.

ಉ) ಮೇಲಿನ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

## ಪುರಸಭೆಗಳನ್ನು ಪುರ ಪಂಚಾಯಿತಿಗಳನ್ನಾಗಿ ಪರಿವರ್ತಿಸುವುದು

೭೬೪. ಶ್ರೀ ಉದಾಸಿ (ಹಾನಗಲ್ಲು),—ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ೨೫,೦೦೦ ಜನಸಂಖ್ಯೆಗಿಂತ ಕಡಿಮೆ ಇರುವ ಪುರಸಭೆಗಳನ್ನು ರದ್ದುಪಡಿಸಿ ಪುರ ಪಂಚಾಯತಿಗಳನ್ನಾಗಿ ಪರಿವರ್ತಿಸಲಾಗುವುದೆ.

ಆ) ೨೦,೦೦೦ ಜನಸಂಖ್ಯೆಗಿಂತಲೂ ಕಡಿಮೆ ಜನಸಂಖ್ಯೆ ಇರುವ ಚಿಕ್ಕ ಪುರಸಭೆಗಳಿಗೆ ಪೂರ್ತಿ ಆರ್ಥಿಕ ನೆರವು ಸರಕಾರವೇ ನೀಡುವುದೆ ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ೨೦,೦೦೦ ಕ್ಕಿಂತಲೂ ಕಡಿಮೆ ಜನಸಂಖ್ಯೆ ಇರುವ ಪುರಸಭೆಗಳನ್ನು ಪುರಪಂಚಾಯಿತಿಗಳನ್ನಾಗಿ ಪರಿವರ್ತಿಸುವ ವಿಚಾರ ಪರಿಶೀಲನೆಯಲ್ಲಿದೆ.

ಆ) ಪುರಸಭೆಗಳಿಗೆ ಸರಕಾರವು ಆರ್ಥಿಕ ನೆರವು ನೀಡುತ್ತಿದೆ.

ಲೋಕಲ್ ಫೈನಾನ್ಸ್ ಕಮಿಷನ್ನು ತನ್ನ ವರದಿಯನ್ನು ನೀಡಿದೆ. ಅದರ ಶಿಫಾರಸ್ಸುಗಳನ್ನು ಪರಿಶೀಲಿಸಲಾಗುವುದು.

## ತುಮಕೂರು ಜಿಲ್ಲೆಯಲ್ಲಿ ಚಾಕಿ ಕೇಂದ್ರಗಳಿರುವ ಸ್ಥಳಗಳ ವಿವರಣೆ

೪೮೫. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ರೇಷ್ಮೆ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ಚಾಕಿ ಕೇಂದ್ರಗಳಿರುವ ಸ್ಥಳಗಳು ಯಾವುವು ; ಈ ಕೇಂದ್ರಗಳು ಯಾವಾಗ ಪ್ರಾರಂಭವಾದವು ; ಚಾಕಿ ಕೇಂದ್ರಗಳು ಮಂಜೂರಾಗಿರುವ ತುಮಕೂರು ಜಿಲ್ಲೆಯ ಇತರ ಸ್ಥಳಗಳಾವುವು ;

ಆ) ತುಮಕೂರು ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿಗೊಳಿಸಲು ವಿದೇಶಿ ನೆರವು ಹಾಗೂ ಇತರ ನೆರವನ್ನು ಬಳಸಲಾಗಿದೆಯೇ ; ಹಾಗಿದ್ದಲ್ಲಿ ಪ್ರತಿ ಕ್ಷೇತ್ರದಲ್ಲಿ ಆಗಿರುವ ಕಾರ್ಯಪ್ರಗತಿ ಏನು ;

ಇ) ತುಮಕೂರು ಜಿಲ್ಲೆಯ ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ?

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಖಾತೆಯ ರಾಜ್ಯ ಸಚಿವರು).—

ಅ) ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಚಾಕಿ ಕೇಂದ್ರಗಳಿವೆ.

೧ ದೊಡ್ಡಗೊಲ್ಲಹಳ್ಳಿ
೨ ಹೊಸಕೆರೆ
೩ ಈಡಿಗರ ಪಾಳ್ಯ
೪ ಜೋಡಿಹೊಸಹಳ್ಳಿ
೫ ಬೆಟ್ಟಹಳ್ಳಿ ಮಠ
೬ ಯಲಚವಾಡಿ
೭ ಯಲಿಯೂರು
೮ ಆಂದಾನಿಗೌಡನಪಾಳ್ಯ
೯ ನಾಗೆನಹಳ್ಳಿ
೧೦ ತೆರೆದಕುಪ್ಪೆ
೧೧ ಚಿಕ್ಕಮಲವಾಡಿ
೧೨ ಗುನ್ನಾಗೆರೆ
೧೩ ಸೆಟ್ಟಿಗೆರೆ
೧೪ ಕುರಡಿಹಳ್ಳಿ
೧೫ ನಿಡವಾಳಲು
೧೬ ಇಪ್ಪಾಡಿ
೧೭ ಗಿಡದಪಾಳ್ಯ
೧೮ ಹೆಬ್ಬೂರು
೧೯ ತೊಂಡಗೆರೆ
೨೦ ಕಡಸಿಂಗನಹಳ್ಳಿ
೨೧ ಸೀನಪ್ಪನಹಳ್ಳಿ

ಮೇಲ್ಕಂಡ ಚಾಕಿ ಕೇಂದ್ರಗಳ ಪೈಕಿ ಕ್ರಮ ಸಂಖ್ಯೆ ೧ರಿಂದ ೧೭ರವರೆಗೆ ೧೯೮೦-೮೧ನೇ ಸಾಲಿನಲ್ಲಿಯೂ ೧೮ರಿಂದ ೨೧ರವರೆಗೆ ೧೯೮೩-೮೪ನೇ ಸಾಲಿನಲ್ಲಿ ಪ್ರಾರಂಭವಾದವು.